# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 160-22**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಡಾ. ರಾಧ ಎಸ್ | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ | ಶ್ರೀನಿವಾಸ್ | **20.06.2025** |
| **ವಯಸ್ಸು** | ಃ | *49* ವರ್ಷ | |
| **ವೃತ್ತಿ** | ಃ | ಸಹಾಯುಕ ನಿರ್ದೇಶಕರು ಆರ್ ಎಫ್ ಎಸ್ ಎಲ್ ಮೆಎಸೂರ | **ಪ್ರಾ.ಸಾ. ಃ 20** |
| **ವಾಸಸ್ಥಳ** | ಃ | ಮೈಸೂರು | **ಚಾ.ಸಾ. ಃ 32** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2011* ನವಂಬರ್ ನಿಂದ ಇಲಿಯವರೆಗೂ ಆರ್ ಎಫ್ ಎಸ್ ಎಲ್ ಮೈಸೂರ್ ನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಮ್ಮ ಕಚೇರಿಗೆ ದಿ.*18.01.2022* ರಂದು ಕವಲಂದೆ ಪೊಲೀಸ್ ಠಾಣೆಯ ಪೇದೆ *181* ರವರು ಅವರ ಠಾಣಾ ಮೊಕದ್ದಮೆ ಸಂಖ್ಯೆ *1/22* ಕ್ಕೆ ಸಂಬಂಧಿಸಿದಂತೆ *6* ಸೀಲಾದ ವಸ್ತುಗಳನ್ನು ವಿಶ್ಲೇಷಣೆಗಾಗಿ ನಮ್ಮ ಕಚೇರಿಗೆ ತಂದಿದ್ದರು. ನಮ್ಮ ಸ್ವಾಗತ ವಿಭಾಗದವರು ಆ ವಸ್ತುಗ್ಳನ್ನು ಸ್ವೀಕರಿಸಿ ಅಹವುಗಳಿಗೆ ಕಚೇರಿಗೆ ಸಂಖ್ಯೆ ಆರ್ ಎಫ್ ಎಸ್ ಎಲ್ ಬಿ ಎಸ್ ಎಸ್ *55/22* ಎಂದು ನೀಡಿ ನಮ್ಮ ಜಿಲವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿದ್ದರು. ನಾನು ಸದರಿ ವಸ್ತುಗಳನ್ನು ಸ್ವೀಕರಿಸಿ ಅವುಗಳನ್ನು ವಿಶ್ಲೇಷಣೆಗಾಗಿ ತೆಗೆದುಕೂಂಡು ನೋಡಲಾಗಿ ಅವುಗಳ ಮೇಲಿದ್ದ ಸೀಲುಗಳು

ಸುಸ್ಥಿತಿಯಲ್ಲಿದ್ದವು ಮುತ್ತ ತನಿಖಾಧಿಕಾರಿಯವರು ಕಳುಹಿಸಿದ್ದ ಮಾದರಿ ಸೀಲು ಮತ್ತು ವಿವರಣೆಗಳಿಗೆ ಹೋಲಿಕೆ ಆಗುತ್ತಿತ್ತು. ನಾನು ಸದರಿ ವಸ್ತುಗಳನ್ನು ತೆಗೆದು ನೋಡಲಾಗಿ ಅವುಗಳು ಈ ಕಳೆಕಂಡತೆ ಇದ್ದವು.

*1)* ಒಂದು ಅಂಡರ್ ವೇರ್

*2)* ಸೊಂಟದ ದಾರ

*3)* ಕುತ್ತಿಗೆ ದಾರ

*4)* ರಕ್ತವನ್ನು ತೆಗೆದ ಬ್ಯಾಂಡೇಜ್ ಬಟ್ಟೆ

*5)* ಮಾದರಿ ನೀರು

*6)* ಸ್ಟರನಮ್ ಮೂಳೆ ಇತ್ತು

ನಾನು ಸದರಿ ವಸ್ತುಗಳನ್ನು ರಸಾಯನಿಕ ಮತ್ತು ಸಿರಾಲಾಜಿ ಪರೀಕ್ಷೆಗ ಒಳಪಡಿಸಿದ್ದೆನು. ನನ ಪರೀಕ್ಷಾ ಫಲಿತಾಂಶದಂತೆ ವಸ್ತು ಸಂಖ್ಯೆ *1* ರಿಂದ *4* ರಲ್ಲಿ ರಕ್ತದ ಕಲೆಗಳು ಕಂಡು ಬಂದಿದದ್ದವು. ವಸ್ತು ಸಂಖ್ಯೆ *1, 2* ಮತ್ತು *3* ರಲ್ಲಿ ಇದ್ದ ರಕ್ತದ ಕಲೆಗಳು ಅತ್ಯಲ್ಪ ಪ್ರಮಾಣದಲಿದ್ದು ಸಿರಾಲಜಿ ಪರೀಕ್ಷೆಗೆ ಸಾಕಾಗಿರುವುದಿಲ್ಲ. ವಸ್ತು *4* ರಲ್ಲಿ ಇದ್ದಂತಹ ರಕ್ತವು ಮನುಷ್ಯನ ಡಿ ಗುಂಪಿಗೆ ಸೇರಿದ ರಕ್ತದ ಕಲೆಯಾಗಿತ್ತು. ವಸ್ತು *5* ಮತ್ತು *6* ರಲ್ಲಿ ಡಯಾಟಮ್ ಎಂಬ ಸೂಕ್ಷ್ಮಾಣು ಜೀವಿಗಳು ಕಂಡು ಬಂದಿದ್ದವು. ಅದರಂತೆ ನನ್ನ ಅಭಿಪ್ರಾಯ ವರದಿಯನ್ನು ನಮ್ಮ ಉಪ ನಿರ್ದೇಶಕರ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ನೀಡಿದ್ದೆನು. ಪರೀಕ್ಷೆಯಾದ ನಂತರ ವಸ್ತು ಸಂಖ್ಯೆ *1* ರಿಂದ *4* ನ್ನು ಮರು ಪ್ಯಾಕ್ ಮಾಡಿ ನಮ್ಮ ಕಚೇರಿಯ ಅರಗು ಸೀಲ್ ನೊಂದಿಗೆ ಮೊಹರು ಮಡಿ ಸಂಬಂಧಿಸಿ ಪೋಲಿಸರಿಗೆ ವಾಪಾಸ್ ನೀಡಿರುತ್ತೇನೆ. ವಸ್ತು ಸಂಖ್ಯೆ *5*

ಮತ್ತು 6 ನ್ನು ನಾಶ ಪಡಿಸಿರುತ್ತೇವೆ. ವಸ್ತುಗಳಿಗೆ ಮೊಹರು ಮಾಡಲು ಉಪಯೋಗಿಸಿದ ಮಾದರಿ ಸೀಲ್ ನ್ನು ನನ್ನ ವರದಿಯೊಂದಿಗೆ ಲಗತ್ತಿಸಿದ್ದೆನು. ನಾನು ಪರೀಕ್ಷೆ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

(ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ಸಾಕ್ಷಿದಾರರು ಒಂದು ಅಂಡರ್ ವೇರ್, ಸೊಂಟದ ದಾರ, ಕುತ್ತಿಗೆ ದಾರ, ರಕ್ತವನ್ನು ತೆಗೆದ ಬ್ಯಾಂಡೇಜ್ ಬಟ್ಟೆ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೆಮಾಲು -2 ರಿಂದ 5 ಎಂದು ಗುರುತಿಸಲಾಯಿತು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.34 ಎಂದು , ಸಾಕ್ಷಿದಾರರ ಸಹಿಯನ್ನು ನಿಪಿ.34(ಎ) ಎಂದು, ಮಾದರಿ ಸೀಲ್ ನ್ನು ನಿಪಿ.35 ಎಂದು, ಸಾಕ್ಷಿಯದಾರರ ಸಹಿಯನ್ನು ನಿಪಿ.35(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ        ರವರಿಂದ:-</u>

ನಿಪಿ.34 ರಲ್ಲಿ ನಾನು ಪರೀಕ್ಷೆಗೆ ಒಳಪಡಿಸಿದ್ದ ಅಂತ ಹೇಳುವ ವಸ್ತುಗಳ ಬಣ್ಣ ಮತ್ತು ಅಳತೆ ಹೇಳಿರುವುದಿಲ್ಲ ಎಂದರೆ ಸರಿ. ನಾವು ಅದನ್ನು ನಮ್ಮ ಪದ್ಧತಿಯ ಪ್ರಕಾರ ನಮೂದಿಸಿರುವುದಿಲ್ಲ. ನಾವು ಪರೀಕ್ಷೆಗೆ ಒಳಪಡಿಸುವ ವಸ್ತುಗಳ ಬಣ್ಣ ಮತ್ತು ಆ ವಸ್ತುವಿನ ಅಳತೆ ಹೇಳಬೇಕಾಗುತ್ತದೆ ಎಂದರೆ ಸರಿಯಲ್ಲ. ನಿಪಿ.34 ರಲ್ಲಿ ನಾನು ನೋಡಿದ್ದೆ ಅಂತ ಹೇಳುವ ವಸ್ತುಗಳ ಮೆಲೆ ಕಂಡು ಬಂತದಂಹ ರಕ್ತದ ಕಲೆಗಳ ವಯಸ್ಸನ್ನು ಹೇಳಿರುವುದಿಲ್ಲ ಎಂದರೆ ಸರಿ. ನಾನು ಯಾವುದೇ ಪರೀಕ್ಷೆಯನ್ನು ಮಾಡದೇ ನಿಪಿ.34 ಮತ್ತು 35 ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

***SC No. 160-22***
***PW-20***

<u>ಮರು ವಿಚಾರಣೆಃ-</u> ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು